ಸ್ವೀ. ಸಂ. (12)
02 JAN 2021

File No.EP/22/MCD/2020-PLAN-EP-Sec

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಸಮಗ್ರ ಶಿಕ್ಷಣ- ಕರ್ನಾಟಕ ಯೋಜನೆಯ ಅಡಿಯಲ್ಲಿ ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು (ಕಾರ್ಯಕ್ರಮ ಹಾಗೂ ಗುಣಮಟ್ಟ)/ಸಹಾಯಕ ಸಮನ್ವಯಾಧಿಕಾರಿಗಳು (ಕಾರ್ಯಕ್ರಮ, ಗುಣಮಟ್ಟ)/ ಬಿ.ಆರ್.ಸಿ.ಸಿ/ಬಿ.ಆರ್.ಪಿ ಹಾಗೂ ಸಿ.ಆರ್.ಪಿ.ಗಳ ಕರ್ತವ್ಯ ಹಾಗೂ ಜವಾಬ್ದಾರಿಗಳ ಮಾರ್ಗಸೂಚಿ ನೀಡುವ ಬಗ್ಗೆ.

ಓದಲಾಗಿದೆ : ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಇವರ ಏಕ ಕಡತ ಸಂಖ್ಯೆ: ಸಶಿಕ/ಮಾ.ದಾ/Job Chart/2020-21
ಸರ್ಕಾರದ ಆದೇಶ ಸಂಖ್ಯೆ: ಇಡಿ 27 ಎಂಸಿಡಿ 2018, ಬೆಂಗಳೂರು ದಿನಾಂಕ:21.08.2018.

******

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರ ಏಕ ಕಡತ ಪ್ರಸ್ತಾವನೆಯಲ್ಲಿ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಇವರು ಸರ್ವ ಶಿಕ್ಷಣ ಅಭಿಯಾನ ಹಾಗೂ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಮತ್ತು ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳನ್ನು ಏಕೀಕರಣಗೊಳಿಸಿ, "ಸಮಗ್ರ ಶಿಕ್ಷಣ ಅಭಿಯಾನ" ಕಾರ್ಯಕ್ರಮವನ್ನು ಕೇಂದ್ರ ಸರ್ಕಾರವು ದಿನಾಂಕ:01.04.2018ರಿಂದ ಜಾರಿಗೆ ತಂದಿದ್ದು, ಪ್ರಸ್ತುತ ಸಮಗ್ರ ಶಿಕ್ಷಣ ಕರ್ನಾಟಕ ಅಭಿಯಾನದಡಿ ರಾಜ್ಯ/ ಜಿಲ್ಲಾ/ಬ್ಲಾಕ್/ಶಾಲಾ ಮಟ್ಟದಲ್ಲಿ ವಿವಿಧ ಹುದ್ದೆಗಳನ್ನು . ಮುಂದುವರಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಇಬ್ಬರು ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು (ಗುಣಮಟ್ಟ ಮತ್ತು ಕಾರ್ಯಕ್ರಮ), ಇಬ್ಬರು ಸಹಾಯಕ ಸಮನ್ವಯಾಧಿಕಾರಿಗಳು, ಬ್ಲಾಕ್ ಹಂತದಲ್ಲಿ ಒಬ್ಬರು ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಮನ್ವಯಾಧಿಕಾರಿಗಳು, 5 ಜನ ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಂಪನ್ಮೂಲ ವ್ಯಕ್ತಿಗಳು ಹಾಗೂ ಕ್ಲಸ್ಟರ್ ಗೆ ಒಬ್ಬರಂತೆ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು ಎಂದು ಪದನಾಮಿಕರಿಸಿದ್ದು, ಇವರೆಲ್ಲರ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಹಂಚಿಕೆ ಮಾಡುವಂತ ಕೋರಿರುತ್ತಾರ.

ಮೇಲೆ ಓದಲಾದ ಕ್ರಮಾಂಕ (2)ರ ಸರ್ಕಾರಿ ಆದೇಶದಲ್ಲಿ ಸಮಗ್ರ ಶಿಕ್ಷಣ ಅಭಿಯಾನದಡಿ ರಾಜ್ಯ ಜಿಲ್ಲಾ/ ಬ್ಲಾಕ್/ಶಾಲಾ ಮಟ್ಟದಲ್ಲಿ 2018-19ನೇ ಶೈಕ್ಷಣಿಕ ಸಾಲಿಗೆ ಅಗತ್ಯ ಹುದ್ದೆಗಳನ್ನು ಮುಂದುವರಿಸಿ ಆದೇಶಿಸಲಾಗಿರುತ್ತದೆ.



ಎನ್.ಎನ್.ಕಬ್ಬೂರ

Scanned by CamScanner

ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಪಿ 22 ಎಂಸಿಡಿ 2020 ಬೆಂಗಳೂರು**

**ದಿನಾಂಕ:30.12.2020**

ಸಮಗ್ರ ಶಿಕ್ಷಣ ಕರ್ನಾಟಕ ಅಭಿಯಾನದಡಿ ಜಿಲ್ಲಾ ಮಟ್ಟದಲ್ಲಿ ಇಬ್ಬರು ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು (ಗುಣಮಟ್ಟ ಮತ್ತು ಕಾರ್ಯಕ್ರಮ), ಇಬ್ಬರು ಸಹಾಯಕ ಸಮನ್ವಯಾಧಿಕಾರಿಗಳು, ಬ್ಲಾಕ್ ಹಂತದಲ್ಲಿ ಒಬ್ಬರು ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಮನ್ವಯಾಧಿಕಾರಿಗಳು, 5 ಜನ ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಂಪನ್ಮೂಲ ವ್ಯಕ್ತಿಗಳು ಹಾಗೂ ಕ್ಲಸ್ಟರ್ ಗೆ ಒಬ್ಬರಂತೆ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು ಎಂದು ಪದನಾಮಿಕರಿಸಿದ್ದು, ಇವರೆಲ್ಲರ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಅನುಬಂಧದಲ್ಲಿ (ಪುಟ 1 ರಿಂದ 16) ಒದಗಿಸಿರುವಂತೆ ಕಾರ್ಯ ಹಂಚಿಕೆ ಮಾಡಿ ಆದೇಶಿಸಿದೆ.

ಪ್ರಸ್ತುತ ರಾಜ್ಯದಲ್ಲಿ ಕೋವಿಡ್-19 ವಿಷಮ ಸ್ಥಿತಿಯಲ್ಲಿ ಆರ್ಥಿಕ ಮಿತವ್ಯಯ ಸಾಧಿಸಬೇಕಾದ ಅವಶ್ಯಕತೆಯಿದ್ದು, ಪದನಾಮಕರಿಸಲಾದ ಹುದ್ದೆಗಳಿಗೆ ಯಾವುದೇ ಹೆಚ್ಚುವರಿ ಆರ್ಥಿಕ ಹೊರೆ ಆಗದಂತೆ ಕ್ರಮವಹಿಸತಕ್ಕದ್ದು ಮತ್ತು ಹೆಚ್ಚುವರಿಯಾಗಿ ಅನುದಾನ ಕೋರತಕ್ಕದ್ದಲ್ಲ.

ಸಮಗ್ರ ಶಿಕ್ಷಣ - ಕರ್ನಾಟಕದಡಿ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಇವರು ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್.ಡಿ 04 ಟಿ.ಎಫ್.ಪಿ 2020 ದಿನಾಂಕ:24.11.2020 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

30.12.2020

(ಎಸ್.ಆರ್.ಎಸ್.ನಾಥನ್)
ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಜನೆ)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

ಇವರಿಗೆ;

1. ಮಹಾಲೇಖಪಾಲರು, (ಆಡಿಟ್ 1 & 2) ಕರ್ನಾಟಕ, ಬೆಂಗಳೂರು.



ಎನ್.ಎನ್.ಕಬ್ಬೂರ

Scanned by CamScanner

2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.
4. ನಿರ್ದೇಶಕರು, ಖಜಾನಾ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು.
5. ಉಪನಿರ್ದೇಶಕರು, ಖಜಾನಾ ಗಣಕ ಕೇಂದ್ರ, ನಂ.49, ಖನಿಜ ಭವನ, ರೇಸ್ಕೋರ್ಸ್ ರಸ್ತೆ, ಬೆಂಗಳೂರು.
6. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಸರ್ಕಾರದ ಉಪಕಾರ್ಯದರ್ಶಿ-2, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
8. ಸಾಪ್ತಾಹಿಕ ರಾಜ್ಯ ಪತ್ರ/ಶಾಖಾರಕ್ಷ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ.**

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು
3. ಆಂತರಿಕ ಆರ್ಥಿಕ ಸಲಹೆಗಾರರ ಆಪ್ತ ಸಹಾಯಕರು, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.



ಎನ್.ಎನ್.ಕಬ್ಬೂರ

Scanned by CamScanner

# ಸಮೂಹ ಸಂಪನ್ಮೂಲ ಸಮನ್ವಾಯಾಧಿಕಾರಿಗಳ (BRC) ಕರ್ತವ್ಯಗಳು ಮತ್ತು ಜವಾಬ್ದಾರಿಗಳು

ದೂರದರ್ಶಿತ್ವವನ್ನು ಬಿ.ಆರ್.ಸಿ.ಸಿ ಯವರು ಹೊಂದಿರತಕ್ಕದ್ದು. ಸೂಕ್ತ ಯೋಜನೆ ಅನುಷ್ಠಾನದ ಮೂಲಕ ತಮ್ಮ ಬ್ಲಾಕಿನ ಶೈಕ್ಷಣಿಕ ದೂರದರ್ಶಿತ್ವವನ್ನು ಸಾಕಾರಗೊಳಿಸಲು ಕ್ರಮ ಜರುಗಿಸುವುದು.

- ತಮ್ಮ ಬ್ಲಾಕಿಗೆ ಸಂಬಂಧಿಸಿದಂತೆ. ಕಲಿಕಾ ಗುಣಮಟ್ಟ ಕುರಿತಂತೆ ಬೇರೆ-ಬೇರೆ ಆಯಾಮಗಳ ಬಾಹ್ಯ ಮೌಲ್ಯಮಾಪನದ ಮೂಲಕ ಕೈಗೊಂಡಿರುವ ಅಧ್ಯಯನಗಳು. (SSK. NCERT ನಡೆಸಿದ ಅಧ್ಯಯನ ಇತ್ಯಾದಿ) ಪ್ರಕಟಿತವಾದ ಕಲಿಕಾ ಗುಣಮಟ್ಟದ ಫಲಶ್ರುತಿಗಳ ಮಾಹಿತಿ ಸಂಗ್ರಹಣೆ ಮಾಡಿ ಅಂತರ ತಾಲ್ಲೂಕು. ಅಂತರ ಜಿಲ್ಲೆಯ ಸರಾಸರಿ ಕಲಿಕಾ ಮಟ್ಟಕ್ಕೆ ಹೋಲಿಸುವುದು ಮತ್ತು ತಮ್ಮ ಬ್ಲಾಕಿನ ಶೈಕ್ಷಣಿಕ ಯೋಜನೆಯಲ್ಲಿ ಬಳಸಿಕೊಳ್ಳುವುದು.
- ಪ್ರತಿ ಶಾಲೆಯನ್ನು ಒಂದು ಘಟಕವಾಗಿ ಪರಿಗಣಿಸಿ ಅಲ್ಲಿನ ಕಲಿಕಾ ಗುಣಮಟ್ಟ ಹೆಚ್ಚಳ ಕುರಿತಂತೆ. ಕಡಿಮೆ ಸಾಧನೆ ಮಾಡಿದ ಮಕ್ಕಳ ಕಲಿಕೆಯ ಪ್ರಗತಿಗೆ ಶೈಕ್ಷಣಿಕ ಯೋಜನೆಯನ್ನು - ಶಾಲೆ. ಕ್ಲಸ್ಟರ್. ಬ್ಲಾಕ್ ಹಂತಕ್ಕೆ ತಯಾರಿಸುವುದು. (SAP. CAP. BAP ತಯಾರಿಸುವ ಬಗ್ಗೆ ಪೂರಕ ತರಬೇತಿಯನ್ನು ನೀಡುವುದು.)
- ಪ್ರಾಥಮಿಕ ಶಾಲಾ ಹಂತದ ಕಲಿಕೆಯ ಸಾಮರ್ಥ್ಯಗಳು ಮತ್ತು ಕಲಿಕಾಂಶಗಳ ಕುರಿತು ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು.
- ಸೇವಾ ನಿರತ ಶಿಕ್ಷಕರಿಗೆ ಮತ್ತು ಹೊಸ ಶಿಕ್ಷಕರಿಗೆ ಸಾಮಾನ್ಯ ಬುನಾದಿ ತರಬೇತಿಗೆ ಆಯೋಜನೆ ಮಾಡುವುದು. ತರಬೇತಿಗೆ ಯೋಜನೆ ತಯಾರಿಸುವಾಗ. ಶಿಕ್ಷಕರ ಅಗತ್ಯಗಳು. ಸಂಪನ್ಮೂಲ ವ್ಯಕ್ತಿಗಳ ಲಭ್ಯತೆ. ತರಬೇತಿ ನೀಡಲು ಭೌತಿಕ ಸೌಲಭ್ಯಗಳ ಲಭ್ಯತೆ. ಅಂಶಗಳನ್ನು ಗಮನಿಸಿ ಯೋಜನೆ ತಯಾರಿಸುವುದು.
- ತರಬೇತಿಯ ಗುಣಮಟ್ಟ ಉತ್ತಮವಾಗಿರಲು ತರಬೇತಿ ಕೈಪಿಡಿ ತಪ್ಪದೇ ತಯಾರಿಸುವುದು. (ತರಬೇತಿ ವಿನ್ಯಾಸ + ತರಬೇತಿ ಸಾಹಿತ್ಯ). ಡಿಎಸ್ಇಆರ್‌ಟಿ ಅನೇಕ ತರಬೇತಿಗಳಿಗೆ ತರಬೇತಿ ಸಾಹಿತ್ಯವನ್ನು ರಚಿಸಿದೆ. ತರಬೇತಿ ಸಾಹಿತ್ಯವನ್ನು ಒದಗಿಸದೇ ಇದ್ದಲ್ಲಿ ಸ್ಥಳೀಯವಾಗಿ ತರಬೇತಿ ಸಾಹಿತ್ಯವನ್ನು ತಯಾರಿಸಿಕೊಳ್ಳುವುದು.
- ಸೂಕ್ತ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡಿ ಅವರಿಗೆ ತರಬೇತಿ ನೀಡಿದ ನಂತರವೇ ಅವರ ಸೇವೆಯನ್ನು ಬಳಸಿಕೊಳ್ಳತಕ್ಕದ್ದು. ಒಟ್ಟಾರೆ ತರಬೇತಿಯ ಆಯೋಜನೆ. ಗುಣಮಟ್ಟದ ತರಬೇತಿ ನೀಡುವಿಕೆ ಮತ್ತು ಉತ್ತಮ ತರಬೇತಿ ಪರಿಸರವನ್ನು ಒದಗಿಸುವುದು ಬಿಆರ್‌ಸಿ ರವರ ಕರ್ತವ್ಯವಾಗಿದೆ.
- ಶಿಕ್ಷಕರ ತರಗತಿ ವೀಕ್ಷಣೆ. ಕಲಿಕೋಪಕರಣಗಳ ಬಳಕೆ ಹಾಗೂ ಇದಕ್ಕಾಗಿ ನೀಡುವ ಅನುದಾನದ ಬಳಕೆ ಮತ್ತು ತರಗತಿ ಸಂವಹನ ಚಟುವಟಿಕೆ ಆಧಾರಿತವಾಗಿ. ಸಮರ್ಪಕವಾಗಿ ಆಗುತ್ತಿರುವ ಕುರಿತು ಭೇಟಿ / ಶೈಕ್ಷಣಿಕ ಮೌಲ್ಯಮಾಪನದ ಅವಧಿಯಲ್ಲಿ ಗಮನಿಸುವುದು. ಇದಕ್ಕಾಗಿ ವಾರ್ಷಿಕ ಕನಿಷ್ಠ 20 ಶಾಲೆಗಳ ಮೌಲ್ಯಮಾಪನ. ಕನಿಷ್ಠ ಮಾಸಿಕ 20 ಶಾಲೆಗಳ ಭೇಟಿ ಹಾಗೂ ಕನಿಷ್ಠ 8 ಸಿ.ಆರ್.ಸಿ ಕೇಂದ್ರಗಳ ವಾರ್ಷಿಕ ತಪಾಸಣೆ ಮಾಡುವುದು.



ಎನ್.ಎನ್.ಕಬ್ಬೂರ

Scanned by CamScanner

- ರಾಜ್ಯ ಸರ್ಕಾರ ಮತ್ತು ಸಮಗ್ರ ಶಿಕ್ಷಣ- ಕರ್ನಾಟಕ, ಕಲಿಕೆಯ ಗುಣಮಟ್ಟ ಹೆಚ್ಚಿಸಲು ಹಾಕಿಕೊಂಡಿರುವ ಕಾರ್ಯಕ್ರಮಗಳು, ವಿವಿಧ ರೀತಿಯ ತರಬೇತಿಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿರುವುದನ್ನು ಖಾತ್ರಿಪಡಿಸುವುದು.
- ಶಿಕ್ಷಕರಲ್ಲಿ ವೃತ್ತಿಪರತ ಮತ್ತು ವೃತ್ತಿ ಬೆಳವಣಿಗೆಯ ದೃಷ್ಟಿಯಿಂದ ವಿಚಾರ ಸಂಕಿರಣ ಶೈಕ್ಷಣಿಕ ಮೌಲ್ಯವುಳ್ಳ ಪ್ರದರ್ಶನಗಳು, ಅಧ್ಯಯನ ಪ್ರವಾಸ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸುವುದು. ಹಾಗೂ ಶಿಕ್ಷಕರಲ್ಲಿ ಸಂಶೋಧನಾ ಪ್ರವೃತ್ತಿ, ಸೃಜನಶೀಲತೆ ಮತ್ತು ವೈಜ್ಞಾನಿಕ ಮನೋಭಾವನೆಯನ್ನು ವೃದ್ಧಿಗೊಳಿಸಲು ಕ್ರಿಯಾ ಸಂಶೋಧನ, ಕಲಿಕಾ-ಬೋಧನೆಯಲ್ಲಿ ನಾವೀನ್ಯತೆಯ ಪ್ರಯತ್ನ ಹಾಗೂ ಆರೋಗ್ಯಕರ ಮುಕ್ತ ವಿಚಾರ ವಿನಿಮಯವನ್ನು ಪ್ರೋತ್ಸಾಹಿಸುವುದು.
- ವಿದ್ಯಾರ್ಥಿಗಳು ಶೈಕ್ಷಣಿಕ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡಲು ಶಾಲೆ, ಕ್ಲಸ್ಟರ್, ಬ್ಲಾಕ್ ಹಂತದಲ್ಲಿ ಸಾಂಸ್ಕೃತಿಕ, ಸಾಹಿತ್ಯಕ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು ಸಂಘಟಿಸುವುದು.
- CAC/G.P/T.P/Z.P ಗಳ ಜನಪ್ರತಿನಿಧಿಗಳಿಗೆ ಹಾಗೂ ಶಾಲಾಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರಿಗೆ ತರಬೇತಿಗಳನ್ನು ಆಯೋಜಿಸುವುದು
- SDMC ಸಭೆಗಳಲ್ಲಿ ಶೈಕ್ಷಣಿಕ ಅಂಶಗಳು-ವಿಶೇಷವಾಗಿ ಕಲಿಕಾ ಗುಣಮಟ್ಟ, ಸಹಪಠ್ಯ ಚಟುವಟಿಕೆಗಳ ಸಂಘಟನೆ ಮತ್ತು ಶಾಲೆಯ ಭೌತಿಕ ಪರಿಸರ ಉತ್ತಮಪಡಿಸುವಿಕೆ ಕುರಿತು ಚರ್ಚೆ, ಅನುಷ್ಠಾನವಾಗುತ್ತಿರುವುದನ್ನು ಖಾತ್ರಿಪಡಿಸುವುದು.
- SDMC / ಸಮುದಾಯದ ಸಹಕಾರವನ್ನು ಪಡೆದು ಶಾಲೆಗಳ ಭೌತಿಕ ಪರಿಸರ ಹಾಗೂ ಶೈಕ್ಷಣಿಕ ಅಭಿವೃದ್ಧಿಗೆ ಅಗತ್ಯ ನೆರವು ಮತ್ತು ಮಾರ್ಗದರ್ಶನವನ್ನು ಶಾಲೆಗಳಿಗೆ ನೀಡುವುದು.
- SDMC ಸಹಕಾರದೊಂದಿಗೆ ಪ್ರತಿ ಶಾಲೆಯಲ್ಲಿ ಶಾಲಾಭಿವೃದ್ಧಿ ಯೋಜನೆಯನ್ನು (SDP) ಸಿದ್ಧಪಡಿಸುವುದು ಹಾಗೂ ಸದರಿ ಸಭೆಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಹೆಚ್ಚು ಒತ್ತು ನೀಡಿ ಅನುಷ್ಠಾನಗೊಳಿಸುವುದು.
- ಕಾಲ ಕಾಲಕ್ಕೆ ಎಸ್.ಡಿ.ಎಂ.ಸಿ ಗಳ ಪುನರ್‌ರಚನೆ ಬಗ್ಗೆ ಅನುಪಾಲನೆ ಮಾಡುವುದು.
- ಬ್ಲಾಕಿನ ಎಲ್ಲಾ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಕಾಲಕಾಲಕ್ಕೆ ಎಸ್.ಡಿ.ಎಂ.ಸಿ ಗಳ ರಚನೆ ಹಾಗೂ ವರ್ಷದ ಪ್ರಾರಂಭದಲ್ಲಿಯೇ ಶಾಲಾಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಲು ಸಂಬಂಧಪಟ್ಟ ಶಾಲೆಗಳ ಮುಖ್ಯಸ್ಥರಿಗೆ ಸೂಚನೆಗಳನ್ನು ನೀಡುವುದು.
- ಹಾಜರಾತಿ ಉತ್ತಮಪಡಿಸುವಲ್ಲಿ ಸಮುದಾಯದ ಪಾತ್ರವನ್ನು ಗಮನಿಸಿ ಅವರು ಈ ಕಾರ್ಯದಲ್ಲಿ ತೊಡಗುವಂತೆ ಮಾಡುವುದು ಹಾಗೂ ಉತ್ತಮ ಕಾರ್ಯ ನಿರ್ವಹಣೆಯ ಪ್ರಕರಣಗಳನ್ನು ಗುರುತಿಸಿ ಗೌರವಿಸುವುದು.

ಎನ್.ಎನ್.ಕಬ್ಬೂರ



ಎನ್.ಎನ್.ಕಬ್ಬೂರ

Scanned by CamScanner

- ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣ ಪ್ರಕ್ರಿಯೆಯನ್ನು ಸಾಧಿಸಲು ಯೋಜಿಸಲಾಗಿರುವ ಹಲವಾರು ಶೈಕ್ಷಣಿಕ ಯೋಜನೆಗಳ ಜಾರಿಯಲ್ಲಿ (ಬಿಸಿಯೂಟ ಮತ್ತು ಇತರೆ ಪ್ರೋತ್ಸಾಹದಾಯಕ ಕಾರ್ಯಕ್ರಮಗಳು) ಸಮುದಾಯದ ಭಾಗವಹಿಸುವಿಕೆಯನ್ನು ಖಾತ್ರಿಪಡಿಸಿಕೊಳ್ಳುವುದು.
- ಬಿಆರ್‌ಸಿ ಕೇಂದ್ರವು ಶಿಕ್ಷಕರಿಗೆ ಉಪಯುಕ್ತವಾದ ಸಾಹಿತ್ಯ, ಬೋಧನೋಪಕರಣಗಳನ್ನು ಒಳಗೊಂಡಂತೆ, ಮತ್ತು ಶಿಕ್ಷಕರ ಸಂದೇಹ ನಿವಾರಣೆಗೆ ಒಂದು ಉತ್ತಮ ಸಂಪನ್ಮೂಲ ಕೇಂದ್ರವಾಗಿ ಕಾರ್ಯ ನಿರ್ವಹಿಸಲು ವ್ಯವಸ್ಥೆಗೊಳಿಸುವುದು.
- ಬ್ಲಾಕ್‌ನಲ್ಲಿನ ಶಾಲೆಯಿಂದ ಹೊರಗುಳಿದ ಮಕ್ಕಳ ವಿವರ ಮತ್ತು ಅವರ ಜಾಡು ಹಿಡಿಯುವ (Child Track) ವರದಿಯನ್ನು ನಿರ್ವಹಿಸುವುದು ಹಾಗೂ ಅನುಪಾಲನೆ ಮಾಡುವುದು.
- ಶಾಲೆಗೆ ನೀಡುವ ವಿವಿಧ ಅನುದಾನಗಳನ್ನು ಬಳಸಿ ಅಲ್ಲಿನ ಶಾಲಾ ಪರಿಸರ ಆಕರ್ಷಣೀಯವಾಗಿರುವಂತೆ ವ್ಯವಸ್ಥೆಗೊಳಿಸುವುದು.
- ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಶಾಲೆಯಲ್ಲಿ ಸಮನ್ವಯ ಶಿಕ್ಷಣ ಪಡೆಯಲು ಮತ್ತು ವಿಶೇಷ ಪ್ರಕರಣಗಳಲ್ಲಿ ಗೃಹಾಧಾರಿತ ಶಿಕ್ಷಣ ಕೊಡಿಸಲು ವ್ಯವಸ್ಥೆಗೊಳಿಸುವುದು.
- ತಮ್ಮ ಬ್ಲಾಕಿನ ವ್ಯಾಪ್ತಿಯ ಶಾಲೆಗಳ ನಕ್ಷೆಗಳನ್ನು ಸಿದ್ಧಪಡಿಸಿ ಶಾಲೆಗಳಲ್ಲಿ ಪ್ರದರ್ಶಿಸಲು ಕ್ರಮ ಕೈಗೊಳ್ಳುವುದು.
- ಶೈಕ್ಷಣಿಕ ಸೂಚ್ಯಾಂಕಗಳಾದ - GER, NER, TPR, PCR, TCR, Gender Parity Index, Transition Rate Repetetition Rate, Drop out Rate, Retention Rate ಇತ್ಯಾದಿ,. ಶಾಲಾ ಅಂಕಿ ಅಂಶಗಳನ್ನು ಕ್ಲಸ್ಟರ್ - ಬ್ಲಾಕ್‌ವಾರು ಕ್ರೋಢೀಕರಿಸಿ ನಿರ್ವಹಿಸುವುದು.
- ಸಮಗ್ರ ಶಿಕ್ಷಣ-ಕರ್ನಾಟಕದ ಯೋಜನೆಗಳನ್ನು ತಯಾರಿಸುವಾಗ ಸಿಆರ್‌ಸಿ ಹಾಗೂ ಇ.ಸಿ.ಒ, ರವರು ಕ್ಲಸ್ಟರ್ ಶೈಕ್ಷಣಿಕ ಅಗತ್ಯತೆಗಳನ್ನು ತಮ್ಮ ಹಂತದಲ್ಲಿಯೇ ಗುರುತಿಸಿ ಸಿದ್ಧಪಡಿಸಿದ ಕ್ರಿಯಾ ಯೋಜನೆಯನ್ನು ಕ್ರೋಢೀಕರಿಸಿ ಬಿಇಓ ರವರ ಮೂಲಕ ಜಿಲ್ಲಾ ಹಂತಕ್ಕೆ ಸಲ್ಲಿಸುವುದು.
- ಎಲ್ಲಾ ಯೋಜನೆಗಳನ್ನು ನಿಗದಿತ ಸಮಯದಲ್ಲಿ ಅನುಷ್ಠಾನಗೊಳಿಸುವಲ್ಲಿ ಕ್ರಮವಹಿಸುವುದು.
- ಸಮಗ್ರ ಶಿಕ್ಷಣ - ಕರ್ನಾಟಕ, ಶಿಕ್ಷಣ ಇಲಾಖೆ ಹಾಗೂ ಇತರೆ ಇಲಾಖೆಗಳು ಶಾಲೆಗಳಿಗೆ ನೀಡುವ ಸೌಲಭ್ಯಗಳ ಲಭ್ಯತೆ ಹಾಗೂ ಅವುಗಳು ಸಮರ್ಪಕವಾಗಿ ಬಳಕೆಯಾಗುವಂತೆ ಸಮನ್ವಯಗೊಳಿಸುವುದು.
- ದಾನಿಗಳ, ಸಂಘ ಸಂಸ್ಥೆಗಳ ಕೊಡುಗೆಗಳು ಶಾಲೆಗಳಿಗೆ ಲಭ್ಯವಾಗುವಂತೆ ನೋಡಿಕೊಳ್ಳುವುದು.
- ಸಮಗ್ರ ಶಿಕ್ಷಣ-ಕರ್ನಾಟಕದ ಅನುದಾನಗಳು ಶಾಲಾ ಹಂತದಲ್ಲಿ ಅನುಷ್ಠಾನಗೊಂಡಿರುವ ಬಗ್ಗೆ ಪರಿಶೀಲನೆ ಮಾಡುವುದು.
- ಶಿಕ್ಷಕರ, ತರಬೇತಿದಾರರ ಮತ್ತು ಶಾಲೆಗಳ ಡೇಟಾಬೇಸ್ ತಯಾರಿಕೆ ಮತ್ತು ನಿರ್ವಹಣೆ (ಶೈಕ್ಷಣಿಕವಾಗಿ ಸಮಗ್ರ ಮಾಹಿತಿಯ ಲಭ್ಯತೆ) ಮಾಡುವುದು.

ಎಸ್.ಎಸ್.ಕೆಬ್ಬೂರ



ಎಸ್.ಎಸ್.ಕೆಬ್ಬೂರ

Scanned by CamScanner

- ವಿವಿಧ ಮಧ್ಯವರ್ತನೆಗಳಲ್ಲಿ ಭಾಗವಹಿಸುವ NGO ಗಳ ಕಾರ್ಯದ ಉಸ್ತುವಾರಿ ಮತ್ತು ಹಣಕಾಸಿನ ಬಿಡುಗಡೆ ಸುಲಲಿತವಾಗಿ ಆಗುತ್ತಿರುವುದನ್ನು ಖಾತ್ರಿ ಮಾಡಿಕೊಳ್ಳುವುದು.
- ಬ್ಲಾಕ್‌ಗೆ ಬಿಡುಗಡೆಯಾದ ವಿವಿಧ ಕಾರ್ಯಕ್ರಮ, ಚಟುವಟಿಕೆಗಳಿಗೆ ಬಿಡುಗಡೆಯಾಗುವ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಿ ಉಪಯೋಗಿತಾ ಪ್ರಮಾಣ ಪತ್ರದೊಂದಿಗೆ ಲೆಕ್ಕಪತ್ರಗಳನ್ನು ನಿರ್ವಹಿಸುವುದು ಹಾಗೂ ಆಡಿಟ್ ತಪಾಸಣೆಗೆ ಹಾಜರು ಪಡಿಸುವುದು ಹಾಗೂ ನಗದು ಪುಸ್ತಕವನ್ನು ಜಂಟಿಯಾಗಿ ನಿರ್ವಹಿಸುವುದು.
- BRC ಯವರು ತಮ್ಮ ಪ್ರವಾಸಪಟ್ಟಿಯನ್ನು ಡಯಟ್ ಪ್ರಾಂಶುಪಾಲರಿಗೆ ನೀಡಿ ಅವರಿಂದ ಅನುಮೋದನ ಪಡೆದುಕೊಳ್ಳುವುದು. ಶಾಲಾ ಭೇಟಿ ಮತ್ತು ಶಾಲೆಯ ಮೌಲ್ಯಮಾಪನದ ಗುಣಾತ್ಮಕತೆಯ ಕುರಿತು ಅವಲೋಕನ ವರದಿ ಪ್ರಸ್ತಾಪಿಸಿ ಹಿಮ್ಮಾಹಿತಿ ನೀಡಬೇಕು.
- CRP/ BIERT /BRP ರವರ ಪ್ರವಾಸ ಪಟ್ಟಿಯನ್ನು ಅನುಮೋದಿಸುವುದು ಹಾಗೂ ಇವರ ದಿನಚರಿ ಪರಿಶೀಲಿಸಿ ಸೂಕ್ತ ಹಿಮ್ಮಾಹಿತಿ ನೀಡಿ ಅನುಮೋದಿಸುವುದು.
- ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಿಆರ್‌ಪಿ ಕಛೇರಿಗಳಿಗೆ ತಿಂಗಳಿಗೊಮ್ಮೆಯಾದರೂ ಭೇಟಿ ನೀಡಿ ಇಲ್ಲಿ ಜರುಗುತ್ತಿರುವ ಕಾರ್ಯ ಚಟುವಟಿಕೆಗಳು ಕುರಿತು ಅವಲೋಕನ ನಡೆಸಿ. ಸೂಕ್ತ ಹಿಮ್ಮಾಹಿತಿ ನೀಡುವುದು ಹಾಗೂ ವರದಿಯನ್ನು ಬಿಇಓ ರವರಿಗೆ ನೀಡುವುದು.
- ಪ್ರತಿ ತಿಂಗಳು ಕ್ಷೇತ್ರ ಮಟ್ಟದಲ್ಲಿ ಬಿ.ಇ.ಓ ರವರ ಅಧ್ಯಕ್ಷತೆಯಲ್ಲಿ ನಡೆಯುವ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿ ಇಲಾಖಾ ಕಾರ್ಯಕ್ರಮಗಳ ಅನುಷ್ಠಾನದ ಕುರಿತು ಅವಲೋಕನ ಮಾಡಲು ಸಹಕರಿಸುವುದು.
- ತಮ್ಮ ವ್ಯಾಪ್ತಿಯ ಮಕ್ಕಳ ಸುರಕ್ಷತೆ, ಮಕ್ಕಳ ಹಕ್ಕುಗಳು ಹಾಗೂ ಪೋಕ್ಸೋ ಕಾಯಿದೆ-2012 ರ ಸಂಬಂಧ ಮತ್ತು ಆರ್.ಟಿ.ಇ ನಿಯಮ 2009 ರ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವುದು.
- ಮೇಲಿನ ಎಲ್ಲಾ ಅಂಶಗಳನ್ನೂ ಒಳಗೊಂಡಂತೆ ಮೇಲಧಿಕಾರಿಗಳು ಸೂಚಿಸುವ ಇತರ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವುದು.



ಎಸ್.ಎಸ್.ಕಬ್ಬೂರ

## ಸರ್ವ ಶಿಕ್ಷಣ ಅಭಿಯಾನ ಕರ್ನಾಟಕ
## ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-01

ಸಂಖ್ಯೆ: ತೈ.ತ./ಬಿ.ಆರ್.ಸಿ/ಕ.ಜ/2007-08 ದಿನಾಂಕ: 21-05-2008

# ಸುತ್ತೋಲೆ

ವಿಷಯ: ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಯವರ ಕರ್ತವ್ಯ ಮತ್ತು ಜವಾಬ್ದಾರಿಗಳು

ಬಿಆರ್‌ಸಿಯವರು ಬ್ಲಾಕ್ ಹಂತದಲ್ಲಿ ಶೈಕ್ಷಣಿಕವಾಗಿ ಪ್ರಮುಖ ಪಾತ್ರ ವಹಿಸುತ್ತಾರೆ. ಈ ಹಿನ್ನೆಲೆಯಲ್ಲಿ ತಮ್ಮ ಬ್ಲಾಕಿನ ಪ್ರಾಥಮಿಕ ಶಾಲೆಗಳ ಕಲಿಕಾ ಗುಣಮಟ್ಟದ ಅಭಿವೃದ್ಧಿಗೆ ಖಚಿತವಾದ ದೂರದರ್ಶಿತ್ವವನ್ನು ಬಿ.ಆರ್.ಸಿ.ಯವರು ಹೊಂದಿರತಕ್ಕದ್ದು. ಯುಕ್ತ ಯೋಜನೆ ; ಅನುಷ್ಠಾನದ ಮೂಲಕ ತಮ್ಮ ಬ್ಲಾಕಿನ ಶೈಕ್ಷಣಿಕ ದೂರದರ್ಶಿತ್ವವನ್ನು ಸಾಕಾರಗೊಳಿಸಲು ಕ್ರಮ ಜರುಗಿಸುವುದು. ಈ ನೇರದಲ್ಲಿ ನಿರ್ವಹಿಸಬೇಕಾದ ಕಾರ್ಯಗಳನ್ನು ಪಟ್ಟಿ ಮಾಡಿದೆ.

❖ **ಶೈಕ್ಷಣಿಕ**

✓ ತಮ್ಮ ಬ್ಲಾಕಿಗೆ ಸಂಬಂಧಿಸಿದಂತೆ - ಕಲಿಕಾ ಗುಣಮಟ್ಟ ಕುರಿತಂತೆ ಬೇರೆ-ಬೇರೆ ಮಾಧ್ಯಮಗಳ ಮೂಲಕ (KSQAO ಫಲಿತಾಂಶ, DIET ಸಂಸ್ಥೆ ಕೈಗೊಂಡಿರುವ ಅಧ್ಯಯನಗಳು, SSA, NCERT ನಡೆಸಿದ ಅಧ್ಯಯನ ಇತ್ಯಾದಿ) ಪ್ರಕಟಿತವಾದ ಕಲಿಕಾ ಗುಣಮಟ್ಟದ ಫಲಶ್ರುತಿಗಳ ಮಾಹಿತಿ ಸಂಗ್ರಹಣೆ ಮಾಡಿ - ಅಂತರ ತಾಲ್ಲೂಕು., ಅಂತರ ಜಿಲ್ಲೆಯ ಸರಾಸರಿ ಕಲಿಕಾ ಮಟ್ಟಕ್ಕೆ ಹೋಲಿಸುವುದು ಮತ್ತು ತಮ್ಮ ಬ್ಲಾಕಿನ ಶೈಕ್ಷಣಿಕ ಯೋಜನೆಯಲ್ಲಿ ಬಳಸಿಕೊಳ್ಳುವುದು.

✓ ರಾಜ್ಯ ಅಥವಾ ಜಿಲ್ಲಾ ಹಂತದಲ್ಲಿ ನಿಗದಿಪಡಿಸಲಾದ ಸರಾಸರಿ ಕಲಿಕಾ ಗುಣಮಟ್ಟವನ್ನು ಗಮನದಲ್ಲಿಟ್ಟುಕೊಂಡು ವಿವಿಧ ಹಂತದ ಕಾರ್ಯ ಯೋಜನೆಗಳನ್ನು ತಯಾರಿಸುವುದು. ಹಾಗೂ ರಾಜ್ಯ ಮತ್ತು ಜಿಲ್ಲಾ ಹಂತದಿಂದ ರೂಪಿತವಾಗಿರುವ ಹೊಸ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಬ್ಲಾಕನ್ನು ಸಜ್ಜುಗೊಳಿಸುವುದು ಮತ್ತು ಗುರಿಗಳನ್ನು ನಿಗಧಿಪಡಿಸುವುದು. [15.06.06 ರಂದು ಕರ್ನಾಟಕ ಸರ್ಕಾರ ಗುಣಾತ್ಮಕ ಶಿಕ್ಷಣದತ್ತ ಕರ್ನಾಟಕದ ಶಾಲೆಗಳು ಎಂಬ ಕಾರ್ಯಕ್ರಮದಡಿ ಸನ್ನದನ್ನು ತಯಾರಿಸಿದೆ. ಇದರ ಪ್ರಕಾರ ತರಗತಿಯ ಶೇ 60 ಮಕ್ಕಳು ನಿರ್ದಿಷ್ಟಪಡಿಸಿದ 80 ರಷ್ಟು ಸಾಮರ್ಥ್ಯಗಳನ್ನು ಸಾಧಿಸಬೇಕೆಂದು ಇರುತ್ತದೆ. ಇದರ ಮುಂದುವರಿಕೆಯಾಗಿ ವಾರ್ಷಿಕವಾಗಿ ಪ್ರತಿ ಶತ 10 ರಂತೆ ಹೆಚ್ಚಿಸಲು ಕ್ರಮ ಮಾಡುವುದು].



ಎನ್.ಎನ್.ಕಬ್ಬೂರ.

Scanned by CamScanner

✓ ಪ್ರತಿ ಶಾಲೆಯನ್ನು ಒಂದು ಘಟಕವಾಗಿ ಪರಿಗಣಿಸಿ ಅಲ್ಲಿನ ಕಲಿಕಾ ಗುಣಮಟ್ಟ ಹೆಚ್ಚಳ ಕುರಿತಂತೆ, ಕಡಿಮೆ ಸಾಧನೆ ಮಾಡಿದ ಮಕ್ಕಳ ಕಲಿಕೆಯ ಪ್ರಗತಿಗೆ ಶೈಕ್ಷಣಿಕ ಯೋಜನೆಯನ್ನು – ಶಾಲೆ, ಕ್ಲಸ್ಟರ್, ಬ್ಲಾಕ್, ಹಂತಕ್ಕೆ ತಯಾರಿಸುವುದು. (SAP, CAP, BAP ಪೂರಕ ತರಬೇತಿಯನ್ನು ನೀಡುವುದು.)

✓ ಪ್ರಾಥಮಿಕ ಶಾಲಾ ಹಂತದ ಕಲಿಕೆಯ ಸಾಮರ್ಥ್ಯಗಳು ಮತ್ತು ಕಲಿಕಾಂಶಗಳ ಕುರಿತು ಅಧ್ಯಾಪಕರಿಗೆ ಮಾರ್ಗದರ್ಶನ ನೀಡುವುದು.

✓ ಅಧ್ಯಾಪಕರ ಮತ್ತು ಸ್ವಯಂ ಸೇವಕರಿಗೆ ನೀಡುವ ತರಬೇತಿಯು ಶೈಕ್ಷಣಿಕ ಗುಣಮಟ್ಟದ ಮೇಲೆ ನೇರವಾಗಿ ಪ್ರಭಾವ ಬೀರುತ್ತದೆ. ಸೇವಾ ನಿರತ ಶಿಕ್ಷಕರಿಗೆ ಮತ್ತು ಹೊಸ ಶಿಕ್ಷಕರಿಗೆ ನಿಗದಿಪಡಿಸಿದ ದಿನಗಳ ತರಬೇತಿ ಆಯೋಜನೆಗೆ ಕ್ರಮ ಮಾಡುವುದು. ತರಬೇತಿ ಯೋಜನೆ ತಯಾರಿಸುವಾಗ, ಶಿಕ್ಷಕರ ಅಗತ್ಯಗಳು, ಸಂಪನ್ಮೂಲ ವ್ಯಕ್ತಿಗಳ ಲಭ್ಯತೆ, ತರಬೇತಿ ನೀಡಲು ಭೌತಿಕ ಸೌಲಭ್ಯಗಳ ಲಭ್ಯತೆ ಅಂಶಗಳನ್ನು ಗಮನಿಸಿ ಯೋಜನೆ ತಯಾರಿಸುವುದು.

ತರಬೇತಿಯ ಗುಣಮಟ್ಟ ಉತ್ತಮವಾಗಿರಲು ತರಬೇತಿ ಮಾಡ್ಯೂಲನ್ನು ತಪ್ಪದೇ ತಯಾರಿಸುವುದು. (ತರಬೇತಿ ವಿನ್ಯಾಸ + ತರಬೇತಿ ಸಾಹಿತ್ಯ). ಡಿಎಸ್ಇಆರ್‌ಟಿ ಅನೇಕ ತರಬೇತಿಗಳಿಗೆ ತರಬೇತಿ ಸಾಹಿತ್ಯವನ್ನು ರಚಿಸಿದೆ. ತರಬೇತಿ ಸಾಹಿತ್ಯವನ್ನು ಒದಗಿಸದೇ ಇದ್ದಲ್ಲಿ ಸ್ಥಳೀಯವಾಗಿ ತರಬೇತಿ ಸಾಹಿತ್ಯವನ್ನು ಡಯಟ್ ಸಮಾಲೋಚನೆಯೊಡನೆ ತಯಾರಿಸಿಕೊಳ್ಳುವುದು.

ಯುಕ್ತ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡಿ ಅವರಿಗೆ ತರಬೇತಿ ನೀಡಿದ ನಂತರವೇ ಅವರ ಸೇವೆಯನ್ನು ಬಳಸಿಕೊಳ್ಳತಕ್ಕದ್ದು. ಒಟ್ಟಾರೆ – ತರಬೇತಿಯ ಆಯೋಜನೆ, ಗುಣಮಟ್ಟದ ತರಬೇತಿ ನೀಡುವಿಕೆ ಮತ್ತು ಉತ್ತಮ ತರಬೇತಿ ಪರಿಸರವನ್ನು ಒದಗಿಸುವುದು ಬಿಆರ್‌ಸಿಯವರ ಕರ್ತವ್ಯವಾಗಿದೆ.

✓ ಶೈಕ್ಷಣಿಕ ವರ್ಷದ ಆರಂಭದಲ್ಲಿ ಸೇತುಬಂಧ ಕಾರ್ಯಕ್ರಮ; ಘಟಕ ಅಥವಾ ಸಾಮರ್ಥ್ಯ ಬೋಧನೆಯ ತರುವಾಯ ಪರಿಹಾರ ಬೋಧನೆ ಮತ್ತು ಇತ್ತೀಚೆಗೆ ಪ್ರಾರಂಭವಾದ ಕಲಿಕಾ ಆಂದೋಲನಗಳಂತಹ ಶೈಕ್ಷಣಿಕ ಗುಣಮಟ್ಟ ಕುರಿತ ಕಾರ್ಯಕ್ರಮಗಳು ಸಮರ್ಪಕವಾಗಿ ನಡೆಯುತ್ತಿರುವುದನ್ನು ಖಚಿತಪಡಿಸುವುದು ಮತ್ತು ಕೊರತೆಗಳನ್ನು ಸರಿಪಡಿಸಲು ಕ್ರಮ ಮಾಡುವುದು.

✓ SLF/CLF/BLF ನೀಡುವ ಮುಂಗಾಣ್ಕೆಗಳಂತೆ (trend) ಚಿಕಿತ್ಸಕ ಕ್ರಮಗಳನ್ನು ತೆಗೆದುಕೊಳ್ಳುವುದು.

✓ ಅಧ್ಯಾಪಕರ ತರಗತಿ ; ಕಲಿಕೋಪಕರಣಗಳ ಬಳಕೆ ಹಾಗೂ ಇದಕ್ಕಾಗಿ ನೀಡುವ ಅನುದಾನದ ಬಳಕೆ ಮತ್ತು ತರಗತಿ ಸಂವಹನ ಚಟುವಟಿಕೆ ಆಧಾರಿತವಾಗಿ ಸಮರ್ಪಕವಾಗಿ ಆಗುತ್ತಿರುವ ಕುರಿತು ಭೇಟಿ / ಶೈಕ್ಷಣಿಕ ಮೌಲ್ಯಮಾಪನದ ಅವಧಿಯಲ್ಲಿ ಗಮನಿಸುವುದು. ಇದಕ್ಕಾಗಿ ತಿಂಗಳಿಗೆ ಕನಿಷ್ಠ 10 ಶಾಲಾ ಭೇಟಿಗಳು ಮತ್ತು 25 ಶಾಲೆಗಳ ಶೈಕ್ಷಣಿಕ ಮೌಲ್ಯ ಮಾಪನವನ್ನು (ತಂಡಗಳಲ್ಲಿ) (BRC+BRP+CRP) ಒಂದು ವರ್ಷದಲ್ಲಿ ನಿರ್ವಹಿಸುವುದು. ಶಾಲೆಗಳನ್ನು ಶ್ರೇಣೀಕರಿಸಿ – ತಳ



Scanned by CamScanner

ಶ್ರೇಣಿಯ ಶಾಲೆಗಳಿಗೆ ಸಾಂದ್ರವಾಗಿ ಭೇಟಿ ನೀಡಿ ಅಂತಹ ಶಾಲೆಗಳು ಪ್ರಗತಿ ಸಾಧಿಸಲು ನೆರವಾಗುವುದು.

✓ ರಾಜ್ಯ ಸರ್ಕಾರ ಮತ್ತು ಸರ್ವ ಶಿಕ್ಷಣ ಅಭಿಯಾನ ಕಲಿಕೆಯ ಗುಣಮಟ್ಟ ಹೆಚ್ಚಿಸಲು ಹಾಕಿಕೊಂಡಿರುವ ಕಾರ್ಯಕ್ರಮಗಳಾದ – ಕಂಪ್ಯೂಟರ್ ಶಿಕ್ಷಣ, ದೂರ ಶಿಕ್ಷಣ, ರೇಡಿಯೋ ಕಾರ್ಯಕ್ರಮ, ಮುಂತಾದವುಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿರುವುದನ್ನು ಖಾತ್ರಿಪಡಿಸುವುದು.

✓ ಅಧ್ಯಾಪಕರಲ್ಲಿ ವೃತ್ತಿಪರತೆ ಮತ್ತು ವೃತ್ತಿ ಬೆಳವಣಿಗೆಯ ದೃಷ್ಟಿಯಿಂದ, ವಿಚಾರ ಸಂಕಿರಣ, ಶೈಕ್ಷಣಿಕ ಮೌಲ್ಯವುಳ್ಳ ಪ್ರದರ್ಶನಗಳು, ಅಧ್ಯಯನ ಪ್ರವಾಸ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸುವುದು. ಹಾಗೂ ಅಧ್ಯಾಪಕರಲ್ಲಿ ಸಂಶೋಧನಾ ಪ್ರವೃತ್ತಿ, ಸೃಜನಶೀಲತೆ, ಮತ್ತು ವೈಜ್ಞಾನಿಕ ಮನೋಭಾವನೆಯನ್ನು ವೃದ್ಧಿಗೊಳಿಸಲು ಕ್ರಿಯಾ ಸಂಶೋಧನೆ, ಕಲಿಕೆ–ಬೋಧನೆಯಲ್ಲಿ ನಾವೀನ್ಯತೆಯ ಪ್ರಯತ್ನ ಹಾಗೂ ಆರೋಗ್ಯಕರ ಮುಕ್ತ ವಿಚಾರ ವಿನಿಮಯವನ್ನು ಶಿಕ್ಷಕ ಸಮುದಾಯದಲ್ಲಿ ಮಾಡಿಕೊಳ್ಳುವುದನ್ನು ಪ್ರೋತ್ಸಾಹಿಸುವುದು.

✓ ವಿದ್ಯಾರ್ಥಿಗಳು ಶೈಕ್ಷಣಿಕ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡಲು ಶಾಲೆ, ಕ್ಲಸ್ಟರ್, ಬ್ಲಾಕ್, ಹಂತದಲ್ಲಿ ಸಾಂಸ್ಕೃತಿಕ, ಸಾಹಿತ್ಯಕ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು ಸಂಘಟಿಸುವುದು. ಪ್ರತಿಭಾ ಕಾರಂಜಿ ಒಂದು ಅವಧಿಯವರೆಗೆ ನಡೆಯುತ್ತದೆ – ಅಲ್ಲಿನ ಕಾರ್ಯಕ್ರಮಗಳು ಆವರ್ತಕವಾಗಿ ಇಡೀ ಶೈಕ್ಷಣಿಕ ವರ್ಷದಲ್ಲಿ ಜರುಗಲು ಏರ್ಪಾಟು ಮಾಡುವುದು.

❖ **ಸಮುದಾಯದ ಭಾಗಿತ್ವ**

ಸರ್ವ ಶಿಕ್ಷಣ ಅಭಿಯಾನ ಯೋಜನೆಯ ಅಂತ್ಯಕ್ಕೆ ಸಮುದಾಯವು ತನ್ನ ಶಾಲೆಗಳನ್ನು ನಿರ್ವಹಿಸಲು ಸೂಕ್ತ ಸಾಮರ್ಥ್ಯ ಮತ್ತು ಭಾಗಿತ್ವವನ್ನು ಬೆಳೆಸಬೇಕೆಂಬುದು ಒಂದು ಆಶಯ. ಇದರ ಸಾಕಾರಕ್ಕೆ ಬಿ.ಆರ್.ಸಿ ಯವರು ಮುಂದೆ ಸೂಚಿಸಿರುವ ಸಂಗತಿಗಳನ್ನು ಗಮನಿಸಿ ಕ್ರಮ ಜರುಗಿಸುವುದು.

✓ SDMC/CAC/G.P/T.P/Z.P ಸಮುದಾಯದ ಮುಖಂಡರಿಗೆ ಶಾಲೆಯ ಅಭಿವೃದ್ಧಿ ಕುರಿತು ತರಬೇತಿಗಳನ್ನು ಆಯೋಜಿಸುವುದು. ಈ ತರಬೇತಿಗಳ ಮೂಲಕ ಶಾಲೆಯ ಅಗತ್ಯತೆಗಳು, ಸಮುದಾಯದ ಸಹಕಾರ, ಅವರ ಕರ್ತವ್ಯ ಜವಾಬ್ದಾರಿ ಕುರಿತಂತೆ ಮನದಟ್ಟು ಮಾಡುವುದು. ಹಾಗೂ ಗುಣಾತ್ಮಕ ಶಿಕ್ಷಣವನ್ನು ಒಂದು ಆಂದೋಲನವನ್ನಾಗಿ ರೂಪಿಸುವುದು.

✓ SDMC ಸಭೆಗಳಲ್ಲಿ ಶೈಕ್ಷಣಿಕ ಅಂಶಗಳು–ವಿಶೇಷವಾಗಿ ಕಲಿಕಾ ಗುಣಮಟ್ಟ ಸಹಪಠ್ಯ ಚಟುವಟಿಕೆಗಳ ಸಂಘಟನೆ ಮತ್ತು ಶಾಲೆಯ ಭೌತಿಕ ಪರಿಸರ ಉತ್ತಮಿಕೆ ಕುರಿತು ಚರ್ಚೆ–ಅನುಷ್ಠಾನವಾಗುತ್ತಿರುವುದನ್ನು ಖಾತ್ರಿಪಡಿಸುವುದು.

✓ ಹಾಜರಾತಿ ಉತ್ತಮಪಡಿಸುವಿಕೆಯಲ್ಲಿ ಸಮುದಾಯದ ಪಾತ್ರವನ್ನು ಗಮನಿಸಿ ಅವರು ಈ ಕಾರ್ಯದಲ್ಲಿ



Scanned by CamScanner

ತೊಡಗುವಂತೆ ಮಾಡುವುದು ಹಾಗೂ ಉತ್ತಮ ಕಾರ್ಯ ನಿರ್ವಹಣೆಯ ಪ್ರಕರಣಗಳನ್ನು ಗುರುತಿಸಿ ಗೌರವಿಸುವುದು.

✓ ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣ ಪ್ರಕ್ರಿಯೆಯನ್ನು ಸಾಧಿಸಲು ಯೋಜಿಸಲಾಗಿರುವ ಹಲವಾರು ಶೈಕ್ಷಣಿಕ ಯೋಜನೆಗಳ ಜಾರಿಯಲ್ಲಿ (ಬಿಸಿಯೂಟ, ಪ್ರೋತ್ಸಾಯಕಗಳು ಇತ್ಯಾದಿ) ಸಮುದಾಯದ ಭಾಗವಹಿಸುವಿಕೆಯನ್ನು ಖಾತ್ರಿಪಡಿಸಿಕೊಳ್ಳುವುದು.

✓ ಬಿಆರ್‌ಸಿ ಕೇಂದ್ರವು ಅಧ್ಯಾಪಕರಿಗೆ ಉಪಯುಕ್ತವಾದ ಸಾಹಿತ್ಯ, ಬೋಧನೋಪಕರಣ, ಮತ್ತು ಅಧ್ಯಾಪಕರ ಸಂದೇಹ ನಿವಾರಣೆಗೆ ಒಂದು ಸಂಪನ್ಮೂಲ ಕೇಂದ್ರವಾಗಿ ಕಾರ್ಯ ನಿರ್ವಹಿಸಲು ವ್ಯವಸ್ಥೆಗೊಳಿಸುವುದು.

✓ ಇದೇ ರೀತಿ ಬಿಆರ್‌ಸಿಯು ಸಮನ್ವಯ ಶಿಕ್ಷಣದ ಸಂಪನ್ಮೂಲ ಕೇಂದ್ರವಾಗಿ ರೂಪುಗೊಳ್ಳಲು ಕ್ರಮ ಮಾಡುವುದು.

❖ **ಸಾರ್ವತ್ರಿಕ ಧಾರಣ, ದಾಖಲೆ, ಅವಕಾಶ**

ಸಾರ್ವತ್ರಿಕ ಧಾರಣ, ದಾಖಲೆ ಮತ್ತು ಅವಕಾಶಗಳನ್ನು ತಮ್ಮ ಬ್ಲಾಕಿನಲ್ಲಿ ಸಾಧಿಸಲು ಬಿಆರ್‌ಸಿಯವರು ಕ್ರಮ ವಹಿಸುವುದು.

✓ ಬ್ಲಾಕ್‌ನಲ್ಲಿನ ಶಾಲೆಯಿಂದ ಹೊರಗುಳಿದ ಮಕ್ಕಳ ವಿವರ ಮತ್ತು ಅವರ ಜಾಡು ಹಿಡಿಯುವ (Child Track) ವರದಿಯನ್ನು ಇಡುವುದು.

✓ ಎಲ್ಲಾ ಮಕ್ಕಳು ಪ್ರತಿಶತ ಕನಿಷ್ಠ 75 ಹಾಜರಾತಿಯನ್ನು ಸಾಧಿಸಲು ಕ್ರಮ ಮಾಡುವುದು. ಇದಕ್ಕಾಗಿ ಸಮುದಾಯ ಜಾಗೃತಿ, ಮನೆಗಳಿಗೆ ಭೇಟಿ, ಜವಾಬ್ದಾರಿ ಹಂಚಿಕೆ, ಗೈರುಹಾಜರಾದವರ ಕುರಿತು ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಸಭೆಗಳಲ್ಲಿ ಚರ್ಚೆ, ಈ ಸಾಧನೆಗೆ ಶ್ರಮಿಸಿದವರನ್ನು ಗುರುತಿಸಿ ಗೌರವಿಸುವುದು, ಬಹು ದಾಖಲಾತಿಗಳನ್ನು ಗುರುತಿಸುವಿಕೆ ಮತ್ತು ಸೂಕ್ತ ರದ್ಧತಿ ಹಾಗೂ, ಪರ್ಯಾಯ ಶಿಕ್ಷಣ ಕೇಂದ್ರಗಳ ಸ್ಥಾಪನೆಗೆ ಬಿಇಓಗಳ ಜೊತೆ ಸಮನ್ವಯದೊಡನೆ ಯೋಜನೆ ರೂಪಿಸುವುದು. (ಎಸ್.ಆರ್.ಬಿ.ಸಿ–ಆಶಾಕಿರಣ). ಪೂರ್ಣ ಹಾಜರಾತಿಯ ತರಗತಿ/ಶಾಲೆಯಲ್ಲಿ ಬಾವುಟ ಹಾರಿಸುವುದು, ಗೈರುಹಾಜರಿ ಹೆಚ್ಚಾಗಿರುವ ಶಾಲೆಗಳಿಗೆ ಯೋಜಿತ ಭೇಟಿ, ಸಮುದಾಯ ಮುಖಂಡರನ್ನು ತೊಡಗಿಸಿಕೊಳ್ಳುವಿಕೆ, ಗೈರುಹಾಜರಿ ಸಮಸ್ಯೆಗೆ ಕ್ಲಿಪ್ತ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದು.

✓ ಎಲ್ಲಾ ಶಾಲಾ ವಯಸ್ಸಿನ ಮಕ್ಕಳು ಗಣತಿಯಾಗಿರುವುದನ್ನು, ಗಣತಿ ವೇಳೆ ಅಡ್ಡ ಪರೀಕ್ಷೆ ಮಾಡಿ ಖಾತ್ರಿಪಡಿಸುವುದು. ಹಾಗೂ ಗಣತಿಯಾದ ಎಲ್ಲಾ ಮಕ್ಕಳು ಔಪಚಾರಿಕ ಅಥವಾ ಪರ್ಯಾಯ ಶಿಕ್ಷಣ ಕೇಂದ್ರಗಳಿಗೆ ದಾಖಲಾಗಿರುವುದನ್ನು ಅವಲೋಕಿಸುವುದು. ಯಾವುದೇ ಮಗು ಶಾಲೆಯಿಂದ ಹೊರಗುಳಿಯತಕ್ಕದ್ದಲ್ಲ. ಇದಕ್ಕಾಗಿ ಮೇ / ಜೂನ್‌ನಲ್ಲಿ ದಾಖಲಾತಿ ಆಂದೋಲನ; ಜುಲೈನಲ್ಲಿ





Scanned by CamScanner

ವಿಶೇಷ ದಾಖಲಾತಿ ಆಂದೋಲನಾ ಮತ್ತು ಪ್ರತಿ ಸೋಮವಾರ ಗೈರುಹಾಜರಿ ಮಗುವಿನ ಮನೆಗೆ ಭೇಟಿ ನೀಡುವ ಕಾರ್ಯಕ್ರಮಗಳು ಸರಿಯಾಗಿ ನಡೆಯುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.

✓ ಶಾಲೆಗೆ ನೀಡುವ ವಿವಿಧ ಅನುದಾನಗಳನ್ನು ಬಳಸಿ ಅಲ್ಲಿನ ಪರಿಸರ ಆಕರ್ಷಕವಾಗಿರುವಂತೆ ವ್ಯವಸ್ಥೆಗೊಳಿಸುವುದು. ಕುಡಿಯುವ ನೀರು ಮತ್ತು ಶೌಚಾಲಯ ಸೌಲಭ್ಯವನ್ನು ಕಲ್ಪಿಸಲು ಕ್ರಮ ಮಾಡುವುದು.

✓ ಶಾಲಾ ಆವರಣದಲ್ಲಿ ನೆರಳಿನ ಗಿಡ, ಹೂ, ಹಣ್ಣಿನ ಗಿಡಗಳನ್ನು ಪೋಷಿಸುವುದರ ಮೂಲಕ ಶಾಲಾ ವಾತಾವರಣವನ್ನು ಆಹ್ಲಾದಕರವಾಗಿ ಇಟ್ಟಿರುವುದನ್ನು ಖಾತ್ರಿಪಡಿಸುವುದು. ಇದಲ್ಲದೆ ಸ್ವಚ್ಛತೆಗೆ / ಶುಚಿತ್ವಕ್ಕೆ ಸಂಬಂಧಿಸಿದಂತೆ ಕ್ರಮ ವಹಿಸುವುದು.

✓ ವಿಕಲ ಚೇತನ ಮಕ್ಕಳು ಶಾಲೆಯಲ್ಲಿ ಸಮನ್ವಯ ಶಿಕ್ಷಣ ಪಡೆಯಲು ಮತ್ತು ವಿಶೇಷ ಪ್ರಕರಣಗಳಲ್ಲಿ ಗೃಹಾಧಾರಿತ ಶಿಕ್ಷಣ ಕೊಡಿಸಲು ವ್ಯವಸ್ಥೆಗೊಳಿಸುವುದು

✓ ಶಾಲಾ ನಕ್ಷೆಯನ್ನು ತಮ್ಮ ಬ್ಲಾಕಿಗೆ ಸಂಬಂಧಿಸಿದಂತೆ ರೂಢಿಸಬೇಕು. ಶಾಲಾ ರಹಿತ ಹಳ್ಳಿಗಳು, ಹೊಸ ಶಾಲೆ ತೆರೆಯಬೇಕಾದ ಮತ್ತು ಉನ್ನತೀಕರಿಸಬೇಕಾದ ಶಾಲೆಗಳ ಸ್ಪಷ್ಟ ಮಾಹಿತಿಯನ್ನು ಹೊಂದಿರಬೇಕು.

❖ **ಆಡಳಿತಾತ್ಮಕ**

✓ ಶೈಕ್ಷಣಿಕ ಸೂಚ್ಯಾಂಕಗಳಾದ – GER, NER, TPR, PCR, TCR, Gender Parity Index, Transition Rate Repetetition Rate, Drop out Rate, retention Rate ಇತ್ಯಾದಿ ಶಾಲಾ ಅಂಕಿ ಅಂಶಗಳನ್ನು ಕ್ಲಸ್ಟರ್ – ಬ್ಲಾಕ್‌ವಾರು ರೂಢಿಸಬೇಕು ಹಾಗೂ ಇವುಗಳನ್ನು ಆಧರಿಸಿ ಯೋಜನೆಗಳನ್ನು ತಯಾರಿಸಬೇಕು.

✓ ಸರ್ವ ಶಿಕ್ಷಣ ಅಭಿಯಾನದ ಯೋಜನೆಗಳನ್ನು ತಯಾರಿಸುವಾಗ ಸಿಆರ್‌ಪಿ ಹಾಗೂ ಸಿಎಇಒಗಳು ಕ್ಲಸ್ಟರ್ ಶೈಕ್ಷಣಿಕ ಅಗತ್ಯತೆಗಳನ್ನು ತಮ್ಮ ಹಂತದಲ್ಲಿಯೇ ಗುರುತಿಸಿ ಸಿದ್ಧಪಡಿಸಿದ ಕ್ರಿಯಾ ಯೋಜನೆಯನ್ನು ಕ್ರೋಢೀಕರಿಸಿ ಬಿಇಒರವರ ಮೂಲಕ ಜಿಲ್ಲಾ ಹಂತಕ್ಕೆ ಸಲ್ಲಿಸುವುದು.

✓ ಅನುಮೋದನೆಗೊಂಡ ಯೋಜನೆಗಳನ್ನು ನಿಗದಿತ ಸಮಯದಲ್ಲಿ ಅನುಷ್ಠಾನಗೊಳಿಸುವಲ್ಲಿ ಕ್ರಮ ವಹಿಸುವುದು.

✓ ಸರ್ವ ಶಿಕ್ಷಣ ಅಭಿಯಾನ, ಶಿಕ್ಷಣ ಇಲಾಖೆ ಹಾಗೂ ಇತರೆ ಇಲಾಖೆಗಳು ಶಾಲೆಗಳಿಗೆ ನೀಡುವ ಸವಲತ್ತುಗಳ ಲಭ್ಯತೆ ಹಾಗೂ ಬಳಕೆಯಾಗುವಂತೆ ನೋಡುವುದು.

✓ ದಾನಿಗಳ, ಸಂಘ ಸಂಸ್ಥೆಗಳ ಕೊಡುಗೆಗಳು ಶಾಲೆಗಳಿಗೆ ಲಭ್ಯವಾಗುವಂತೆ ನೋಡಿಕೊಳ್ಳುವುದು.



ಎನ್.ಎನ್.ಕಬ್ಬೂರ.

Scanned by CamScanner

✓ ಎಸ್‌ಎಸ್‌ಎ ಅನುದಾನಗಳು ಖರ್ಚಾಗಿರುವ ಬಗ್ಗೆ ಶಾಲಾ ತಪಾಸಣೆ ನಡೆಸುವುದು. ನಿವೃತ್ತರಾಗಲಿರುವ ಮುಖ್ಯ ಶಿಕ್ಷಕರಿಗೆ NOC ಕೊಡುವ ಸಂದರ್ಭದಲ್ಲಿ ಎಸ್‌ಎಸ್‌ಎ ಅನುದಾನಗಳ ಬಳಕೆ ಬಗ್ಗೆ ಸಿಎಇಓ ಮತ್ತು ಬಿಆರ್‌ಸಿಯವರು ತಪಾಸಣೆ ಮಾಡಿ NOC ಯನ್ನು ಬಿಇಓ ರವರಿಗೆ ನೀಡುವುದು.

✓ ಎಸ್‌ಎಸ್‌ಎ ಕಾಮಗಾರಿಗಳ ಅಂತಿಮ ದೃಢೀಕರಣ ನೀಡುವಲ್ಲಿ ಬಿಆರ್‌ಸಿಗಳು ಸಹ ಪರಿಶೀಲಿಸಿ ದೃಢೀಕರಿಸುವುದು.

✓ ಕೆಜಿಬಿವಿ ಶಾಲೆಗಳ ಉಸ್ತುವಾರಿ ಮತ್ತು ಇಲಾಖೆಯ ಸೌಲಭ್ಯಗಳು ಈ ಶಾಲೆಗೆ ದೊರಕುವಂತೆ ಕ್ರಮ ಮಾಡುವುದು.

✓ ಶಿಕ್ಷಕರ, ತರಬೇತಿದಾರರ ಮತ್ತು ಶಾಲೆಗಳ ಡೇಟಾಬೇಸ್ ತಯಾರಿಕೆ ಮತ್ತು ನಿರ್ವಹಣೆ (ಶೈಕ್ಷಣಿಕವಾಗಿ ಸಮಗ್ರ ಮಾಹಿತಿಯ ಲಭ್ಯತೆ)

✓ ವಿವಿಧ ಮಧ್ಯವರ್ತನೆಗಳಲ್ಲಿ ಭಾಗವಹಿಸುವ NGO ಗಳ ಕಾರ್ಯದ ಉಸ್ತುವಾರಿ ಮತ್ತು ಹಣಕಾಸಿನ ಬಿಡುಗಡೆ ಸುಲಲಿತವಾಗಿ ಆಗುತ್ತಿರುವುದನ್ನು ಖಾತ್ರಿ ಮಾಡಿಕೊಳ್ಳುವುದು.

✓ ಬ್ಲಾಕ್‌ಗೆ ಬಿಡುಗಡೆಯಾದ ವಿವಿಧ ಕಾರ್ಯಕ್ರಮ/ಚಟುವಟಿಕೆಗಳಿಗೆ ಬಿಡುಗಡೆಯಾಗುವ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಿ ಉಪಯೋಗ ಪ್ರಮಾಣ ಪತ್ರದೊಂದಿಗೆ ಲೆಕ್ಕಪತ್ರಗಳನ್ನು ನಿರ್ವಹಿಸುವುದು ಹಾಗೂ ಆಡಿಟ್ ತಪಾಸಣೆಗೆ ಹಾಜರುಪಡಿಸುವುದು.

❖ **ಉಸ್ತುವಾರಿ ಮತ್ತು ಸಮನ್ವಯನ**

ಉಸ್ತುವಾರಿ ಮತ್ತು ಸಮನ್ವಯನ ಗರಿಷ್ಠ ಸಾಧನೆ ಹಾಗೂ ಗುರಿ ಸಾಧನೆ ಅನುಲೋಮ ಸಂಬಂಧವನ್ನು ಹೊಂದಿವೆ. ಮುಖ್ಯವಾದ ಹಂತಗಳನ್ನು ಪಟ್ಟಿ ಮಾಡಿದೆ.

✓ ಬದಲಾದ ಸನ್ನಿವೇಶದಲ್ಲಿ CRP ಯವರ ಜೊತೆಗೆ CAEO, IERT ಕ್ಲಸ್ಟರ್ ಜೆಂಡರ್ ಕೋಆರ್ಡಿನೇಟರ್ ಮತ್ತು ಬ್ಲಾಕ್ ಜೆಂಡರ್ ಕೋ ಆರ್ಡಿನೇಟರ್‌ಗಳ ಸಭೆಯನ್ನು ಕನಿಷ್ಠ ತಿಂಗಳಿಗೊಮ್ಮೆ ಆವರ್ತಕವಾಗಿ (3ನೇ ತಾರೀಖಿನೊಳಗೆ) ನಡೆಸುವುದು. ಗುಣಮಟ್ಟ ಸಂಬಂಧಿ ವಿಚಾರಗಳು, ದೂರ ಶಿಕ್ಷಣ ಕಾರ್ಯಕ್ರಮಗಳು ಇತ್ಯಾದಿ ಕಾರ್ಯಗಳು ಪ್ರಥಮಾದ್ಯತೆ ಮೇರೆಗೆ ಚರ್ಚಿಸಿ–ಅನುಷ್ಠಾನಗೊಳ್ಳಬೇಕು. ಚರ್ಚೆಯ ಅವಧಿಯಲ್ಲಿ ಕೊರತೆಗಳನ್ನು ಸರಿಪಡಿಸಲು ಅಗತ್ಯ ಹಿಮ್ಮಾಹಿತಿ ನೀಡುವುದು. ಈ ಸಭೆಯನ್ನು ಬಿಇಓ/ಬಿಆರ್‌ಸಿಯವರು ಜಂಟಿಯಾಗಿ ನಡೆಸುವುದು.

✓ BRC ಯವರು ತಮ್ಮ TP / TD ಯನ್ನು BEO ರವರಿಗೆ ಮತ್ತೊಂದು ಪ್ರತಿಯನ್ನು ಡಯಟ್ ಪ್ರಾಂಶುಪಾಲರಿಗೆ ನೀಡುವುದು. TP ಮತ್ತು TD – ಯ ಅವಲೋಕನ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಆಯಾಮಗಳಲ್ಲಿ ಜರುಗಬೇಕು. ಶಾಲಾ ಭೇಟಿ ಮತ್ತು ಶಾಲೆಯ ಮೌಲ್ಯಮಾಪನದ ಗುಣಾತ್ಮಕತೆಯ ಕುರಿತು ಅವಲೋಕನ ವರದಿ ಪ್ರಸ್ತಾಪಿಸಿ ಹಿಮ್ಮಾಹಿತಿ ನೀಡಬೇಕು.



ಎನ್.ಎಸ್.ಕಬ್ಬೂರ.

Scanned by CamScanner